ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Saturday, 24th March, 1973/ Chaitra 3, 1895 S.E.

The House met in the Assembly Chamber, Vidhana Soudha, at Nine of the Clock.

Mr. DEPUTY SPEAKER [SRI. B. P. KADAM] in the Chair.

STARRED QUESTIONS

(to which oral answers were given)

Leakage in Sluice Gates of T. B. Dam

23. Sri B. SATYANARAYANA SINGH (Hospet).—

Will the Minister of State for Major Irrigation be pleased to state ;—

(*a*) whether there is heavy leakage of water in the sluice gates at T. B. Head Works at T. B. Dam ;

(*b*) whether the leakage water goes into the river which is advantageous to Andhra Pradesh ;

(*c*) whether it is fact that leakage of water comes to about 200 cusecs of water ;

(*d*) the steps the State Government have taken to move the Tungabhadra Board to stop this leakage ?

Sri H.N. NANJE GOWDA (Minister of State for Major Irrigation).—

(*a*) There is no leakage in the sluice gates. Some leakage has been observed in the spillway gates.

(*b*) The leakage water will be advantageous both to Andhra Pradesh and Mysore.

(*c*) No, it is about 60 cusecs.

(*d*) Tungabhadra Board Authorities have been urged to complete the repairs to the crest gates during this season.

ಶ್ರೀ ಬಿ. ಸತ್ಯನಾರಾಯಣಸಿಂಗ್.—ತಾವು (ಅ) ಗೆ ಉತ್ತರವಾಗಿ ಸೋರಿದ ನೀರು ಆಂಧ್ರ ಪ್ರದೇಶಕ್ಕೂ ಮತ್ತು ಮೈಸೂರು ರಾಜ್ಯಗಳೆರಡಕ್ಕೂ ಅನುಕೂಲವಾಗುತ್ತದೆ ಎಂದು ತಿಳಿಸಿದ್ದೀರಿ. ಆದರೆ ನಾನು ಹೇಳುತ್ತೇನೆ. ಈ ಉತ್ತರ ತಪ್ಪು ಎಂದು. ಸೋರಿದ ನೀರು ನದಿಗೆ ಹೆಚ್ಚಾಗಿ ಹೋಗುವುದರಿಂದ ಆಂಧ್ರದವರಿಗೆ ಉಪಯೋಗವಾಗುತ್ತದೆ, ನಮಗೆ ಉಪಯೋಗವಾಗುವುದಿಲ್ಲ. ತಾವು ಇದಕ್ಕೆ ಏನು ಹೇಳುತ್ತೀರಿ ?

ಶ್ರೀ ಎಚ್. ಎನ್. ನಂಜೇಗೌಡ.—ಇಬ್ಬರಿಗೂ ಉಪಯೋಗವಾಗುತ್ತದೆ ಎಂದು ವರದಿ ಇದೆ.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಇಬ್ಬರಿಗೂ ಉಪಯೋಗವಾಗುವುದು ಹೇಗೆ ? ನದಿಯ ಕೊನೆಯ ಭಾಗದಲ್ಲಿ ಆಂಧ್ರ ಏರಿಯಾ ಇರುವುದರಿಂದ ನೀರು ಹೆಚ್ಚಾಗಿ ಹರಿಯುತ್ತದೆ, ಮತ್ತು ಅಲ್ಲಿ ಹೆಚ್ಚಿಗೆ ಉಪಯೋಗವಾಗುತ್ತದೆ ಎಂದು ನಾನು ಹೇಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ವರ್ಕಿಂಗ್ ಟೇಬರ್ ಮಾಡುವಾಗ ಇದನ್ನೆಲ್ಲಾ ಗಣನೆಗೆ ತೆಗೆದುಕೊಂಡು ತಮ್ಮಾರು ಮಾಡಿರುತ್ತಾರೆ. ಇದರಿಂದ ಇಬ್ಬರಿಗೂ ಉಪಯೋಗವಾಗುತ್ತದೆಂದು ವರದಿ ಕಳುಹಿಸಿದ್ದಾರೆ.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಈ ರೀತಿ ತೂಬು ಮತ್ತು ಬಾಗಿಲುಗಳಿಂದ ಸೋರುವ ನೀರು 200 ಕ್ಯೂಸೆಕ್ಸ್‌ಗಳು ಎಂದು ರಾಜ್ಯ ಸರ್ಕಾರದ ಪ್ರತಿನಿಧಿಗಳು ತುಂಗಭದ್ರಾ ಬೋರ್ಡ್ ನವರ ಗಮನಕ್ಕೆ ತಂದಿದ್ದಾರೆ. ಆದರೆ ಇವತ್ತಿನವರೆಗೂ ಅದರ ರಿಪೇರಿಯಾಗಲಲ್ಲ. ಹರಿದು ಹೋಗುವ ನೀರನ್ನು ನಿಲ್ಲಿಸುವುದಕ್ಕೆ ಪ್ರಯತ್ನಪಟ್ಟಿಲ್ಲ. You have said Thungabhadra Board Authorities have been urged to complete the repairs. ಅವರು ಪ್ರಾರಂಭಮಾಡಿಲ್ಲ, ಕಂಪ್ಲೀಟ್ ಆಗುವ ಪ್ರಶ್ನೆ ಬರುವುದಿಲ್ಲ. ಬೋರ್ಡಿನಲ್ಲಿ ಇದನ್ನು ಚರ್ಚೆ ಮಾಡಿ ನಿರ್ದಿಷ್ಟ ಕಾಲದಲ್ಲಿ ರಿಪೇರಿ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ಪ್ಯಾಕಿಂಗ್ ಮೆಟೀರಿಯಲ್ ನವೆದು ಹೋಗುತ್ತದೆ. ಆದ್ದರಿಂದ ಲೀಕೇಜ್ ಇರುತ್ತದೆ. 5ಗೇಟ್ ಕಡೆ ಲೀಕೇಜ್ ಗೇಜ್‌ಮಾಡಿದ್ದಾರೆ. ಮತ್ತು ಇರ ತಕ್ಕಂಥ ಗೇಟ್ಸ್‌ಗಳಲ್ಲಿಯೂ ಕೂಡ ಲೀಕೇಜ್ ಅನ್ನು ಗೇಜ್ ಮಾಡಿದ್ದಾರೆ. ಸೋರಿ ಹೋಗು ತ್ತಿರುವ ನೀರು 60 ಕ್ಯೂಸೆಕ್ಸ್ ಇದೆ. ಇದು ನಮಗೆ ಬಂದಿರತಕ್ಕ ವರದಿ, ಇದರ ರಿಪೇರಿಯನ್ನು ಮಾಡಬೇಕು ಎಂದು ಒತ್ತಾಯ ಮಾಡಿದ್ದೇವೆ. ಮಾಡುತ್ತಾರೆ ಎನ್ನತಕ್ಕದ್ದು ನಮ್ಮ ನಿರೀಕ್ಷೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ಪಿಲ್‌ವೇ ಗೇಟ್ಸ್ ವಿಷಯ ಹೇಳಿದರಿ, ಯಾವಾಗ ಲೀಕೇಜಸ್ ಅನ್ನು ಅಬ್ಸರ್ವ್ ಮಾಡಿದ್ದು, ಎನ್‌ಕ್ವಯರ್ ಮಾಡಿ, ವರದಿ ತರಿಸಿಕೊಂಡಿದ್ದು ಯಾವಾಗ ? ಯಾವಾಗ ರಿಪೇರಿ ಕಂಪ್ಲೀಟ್ ಮಾಡುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ಸೋರಿಹೋಗುವ ನೀರಿನಿಂದ ಎರಡು ರಾಜ್ಯಕ್ಕೆ ಅನುಕೂಲ ವಾಗುತ್ತದೆಂದು ಹೇಳಿದರು. ಮಾನ್ಯ ಸತ್ಯನಾರಾಯಣಸಿಂಗ್ ಅವರು ಸರಿಯಲ್ಲ ಎಂದು ಹೇಳಿದರು. ನಾವು ಗರಾಜೆವಾಡಿದ ಮೇಲೆ ಬೋರ್ಡ್ ಅಥಾರಿಟೀಸ್, ಸೋರಿಹೋಗುವ ನೀರು 60ಕ್ಯೂಸೆಕ್ಸ್ ಎಂದು ಗೇಜ್ ಮಾಡಿರತಕ್ಕದ್ದು. ಇಲ್ಲಿರತಕ್ಕ ವರದಿಯ ಪ್ರಕಾರ ಇದನೆಯ ಗೇಜಿನ ರಬ್ಬರ್ ಲೈನಿಂಗ್ ಬದಲಾವಣೆಮಾಡಿ ಪ್ಯಾಕ್‌ಅಪ್ ಮಾಡಿದ್ದಾರೆ. ಇನ್ನು ಎಷ್ಟು ಗೇಟುಗಳಲ್ಲಿ ಲೀಕೇಜ್ ಆಗಿದೆ ಎನ್ನತಕ್ಕದ್ದು ಗೊತ್ತಿಲ್ಲ.

ಶ್ರೀ ಎಂ. ಜಿ. ಜಯಪ್ರಕಾಶ್ ನಾರಾಯಣ್.—ಮಾನ್ಯ ಸದಸ್ಯರು 200 ಕ್ಯೂಸೆಕ್ಸ್ ಪ್ರಮಾಣದಲ್ಲಿ ನೀರು ಲೀಕೇಜ್ ಆಗುತ್ತದೆಂದು ಹೇಳಿದ್ದಾರೆ. ತಾವು 60 ಕ್ಯೂಸೆಕ್ಸ್ ಮಾತ್ರ ಲೀಕೇಜ್ ಆಗುತ್ತದೆಂದು ಹೇಳಿದ್ದೀರಿ. ನೀವು ಅಲ್ಲಿ ಮಾಡಿದಂಥ ಅಧ್ಯಯನ, ಪರೀಕ್ಷೆ ಯಾವುದು ? ಇನ್ನೊಂದು ಅಂಶ, ಎರಡು ರಾಜ್ಯಗಳಿಗೆ 60 ಕ್ಯೂಸೆಕ್ಸ್ ನೀರಿನಿಂದ ಅನುಕೂಲವಾಗುತ್ತದೆ ಎಂದು ಹೇಳಿದ್ದೀರಿ, ಇದರಲ್ಲಿ ಮೈಸೂರು ರಾಜ್ಯಕ್ಕೆ ಎಷ್ಟು ನೀರು ಸಿಕ್ಕುತ್ತದೆ, ಆಂಧ್ರಪ್ರದೇಶಕ್ಕೆ ಎಷ್ಟು ನೀರು ಸಿಕ್ಕುತ್ತದೆ ?

ಶ್ರೀ ಎಚ್. ಎನ್. ನಂಜೇಗೌಡ.—ಡಿಸೆಂಬರ್ ತಿಂಗಳಿಂದ ಜನವರಿ 1973ರ ವರೆಗೆ ಗೇಜ್ ಮಾಡಿದ್ದಾರೆ. ಆದರ ಆಧಾರದ ಮೇಲೆ ಎಷ್ಟು ಲೀಕೇಜಸ್ ಇದೆ ಎಂದು ಅರ್ಥತುಕೊಂಡು ಎರಡು ರಾಜ್ಯಕ್ಕೆ ಅನುಕೂಲವಾಗುತ್ತದೆಂದು ಹೇಳಿದ್ದೇವೆ. 60ಕ್ಯೂಸೆಕ್ಸ್ ಮೇಲೆ ಡ್ಯಾಮ್ ಮಾಡಬಾರದು ಎಂದು ಒತ್ತಾಯ ಮಾಡಿ, ಅದನ್ನು ಅವರು ಒಪ್ಪಿಕೊಂಡು ಆ ರೀತಿ ನಡೆದುಕೊಳ್ಳುತ್ತಿದ್ದಾರೆ. ಇದರಿಂದ ಇಬ್ಬರಿಗೂ ಅನುಕೂಲವಾಗುತ್ತದೆ, ಒಬ್ಬರಿಗೆ ಲಾಭವಾಗುತ್ತಿಲ್ಲ.